**ಸಾಕ್ಷಿಗೆ ದಿನಾಂಕಃ29-10-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: 1 ನೇ ಪ್ರತಿವಾದಿ ಪರ ಶ್ರೀ. SNR ವಕೀಲರಿಂದ ::**

ಪ್ರಸ್ತುತ ದಾವೆಯನ್ನು ಈಶ್ವರಪ್ಪ ಎನ್ನುವವರು ಹೂಡಿರುತ್ತಾರೆ. ಯಾರ ವಿರುದ್ದ ದಾವೆ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ಯಾವ ಆಸ್ತಿಗೆ ಸಂಬಂಧಪಟ್ಟಂತೆ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಗ್ಯಾರೇಜ್ ನಡೆಸುವ ವಿಚಾರ ಬಿಟ್ಟರೆ ನನಗೆ ದಾವಾ ಶೆಡ್ಯೂಲ್ ಸ್ವತ್ತಿನ ಇತರೇ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿ. 2018 ನೇ ಸಾಲಿನಲ್ಲಿ ನನ್ನ ಗ್ಯಾರೇಜ್ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಗ್ಯಾರೇಜ್ ಅನ್ನು 2019 ನೇ ಸಾಲಿನಲ್ಲಿ ಹಾಕಿಕೊಂಡಿರುತ್ತೇನೆ. ದಾವಾ ಹೂಡುವ ಸಮಯದಲ್ಲಿ ನನ್ನ ಗ್ಯಾರೇಜ್ ಅಸ್ತಿತ್ವದಲ್ಲಿ ಇಲ್ಲದ ಕಾರಣ ನನಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಇರುವ ವಿಚಾರಗಳ ಬಗ್ಗೆ ನನಗೆ ತಿಳಿದಿರುತ್ತದೆ.

ದಾವಾ ಶೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಖಾಲಿ ಜಾಗ, ಉತ್ತರಕ್ಕೆ ರಾಷ್ಟೀಯ ಹೆದ್ದಾರಿ ಇರುತ್ತದೆ, ದಕ್ಷಿಣಕ್ಕೆ ಲೇಔಟ್ ಮತ್ತು ಪಶ್ಚಿಮಕ್ಕೆ ಖಾಲಿ ಜಾಗ ಇರುತ್ತದೆ. ಲಲಿತಮ್ಮ ರವರ ನಿವೇಶನದ ಬಗ್ಗೆ ನನಗೆ ತಿಳಿದಿರತ್ತದೆಯೇ ಎಂದರೆ ಸಾಕ್ಷಿಯು ಅಲ್ಲಿ ಅವರಿಗೆ ಸೇರಿದ ಖಾಲಿ ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಇಟ್ಟಿರುವ ಗ್ಯಾರೇಜ್ ಲಲಿತಮ್ಮ ರವರ ಜಾಗದಲ್ಲಿ ಇರುತ್ತದೆಯೇ ಅಥವಾ ಈಶ್ವರಪ್ಪ ರವರ ಜಾಗದಲ್ಲಿ ಇರುತ್ತೆದೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಗ್ಯಾರೇಜ್ ಗೆ ಸಂಬಂಧಪಟ್ಟಂತೆ ನನ್ನ ಮಾಲೀಕರು ಒಂದು ಕರಾರುಪತ್ರವನ್ನು ಮಾಡಿಕೊಂಡಿರಬಹುದು ನನಗೆ ಗೊತ್ತಿಲ್ಲ. ನಮ್ಮ ಮಾಲೀಕರ ಹೆಸರು ದೀಪು ಆಗಿರುತ್ತದೆ. ಸದರಿ ದೀಪು ರವರು ಯಾರ ಬಳಿ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ದಾವೆಯ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲದಿದ್ದರೂ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**(2 ಡಿ ನೇ ಪ್ರತಿವಾದಿಗಳ ಪರ ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**(2 ಎ ರಿಂದ ಸಿ ಪ್ರತಿವಾದಿಗಳು ಏಕ ಪಕ್ಷೀಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: